## ಊ) ಕರ್ನಾಟಕ ವ್ಯವಸ್ಥಿತ ಅಪರಾಧಗಳು (ತಿದ್ದುಪಡಿ) ನಿಯಂತ್ರಣ ವಿಧೇಯಕ, 2009

### ಪರ್ಯಾಲೋಚನಾ ಪ್ರಸ್ತಾವ

**ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು)** : ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಕರ್ನಾಟಕ ವ್ಯವಸ್ಥಿತ ಅಪರಾಧಗಳು (ತಿದ್ದುಪಡಿ) ನಿಯಂತ್ರಣ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಅಧ್ಯಕ್ಷರು** : ಸಚಿವರೆ, ಸದರಿ ಬಿಲ್ ಬಗ್ಗೆ ವಿವರ ನೀಡಿ.

**ಡಾ: ವಿ.ಎಸ್.ಆಚಾರ್ಯ** : 2000ನೇ ಇಸವಿಯಲ್ಲಿ ಕೋಕಾ ಅಥವಾ Karnataka Control of Organized Crime ಈ ಕಾಯಿದೆ ಜಾರಿಯಾಯಿತು. ಆಗ ಇದನ್ನು ಯೋಚನೆ ಮಾಡಿರಲಿಲ್ಲ ಅಥವಾ ಅವಗಾಹನೆ ಮಾಡಿರಲಿಲ್ಲ. 'Organized Crime' definitionನಲ್ಲಿ terrorism ಎನ್ನುವ nomenclature ಇರಲಿಲ್ಲ. ಹಾಗಾಗಿ definition clauseನಲ್ಲಿ 'ವ್ಯವಸ್ಥಿತ ಅಪರಾಧ' ಎನ್ನುವ definitionನಲ್ಲಿ ಭಯೋತ್ಪಾದನಾ ಕೃತ್ಯವನ್ನು ಒಂದು ವ್ಯವಸ್ಥಿತ ಅಪರಾಧ ಎಂಬುದಾಗಿ ಸೇರಿಸಲು ಮತ್ತು ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸಲು ಕರ್ನಾಟಕ ವ್ಯವಸ್ಥಿತ ಅಪರಾಧ ನಿಯಂತ್ರಣ ಅಧಿನಿಯಮ 2000ಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಭಾವಿಸಲಾಗಿದೆ. ಎಂದರೆ,

1. ಭಯೋತ್ಪಾದನೆ ಕೃತ್ಯ ಮಾಡಿದ್ದಕ್ಕಾಗಿ ಅಪರಾಧ ಮಾಡುವುದಕ್ಕೆ ಭಯಹುಟ್ಟಿಸುವಂಥ ಮರಣದಂಡನೆ ಅಥವಾ ಆಜೀವ ಕಾರಾವಾಸದ ಮತ್ತು 10 ಲಕ್ಷ ರೂ.ಗಳ ಜುಲ್ಮಾನೆಯ ಶಿಕ್ಷೆಯನ್ನು ವಿಧಿಸುವುದು.
2. ತನಿಖೆ ನಡೆಯುತ್ತಿರುವಾಗ ಆಪಾದಿತನ ಸ್ವತ್ತನ್ನು ಜಪ್ತಿ ಮಾಡುವುದು.
3. ದೋಷಾರೋಪಣ ಪಟ್ಟಿಯನ್ನು ದಾಖಲು ಮಾಡುವುದಕ್ಕಾಗಿನ ಅವಧಿಯನ್ನು ಒಂದು ನೂರ ಎಂಭತ್ತು ದಿನಗಳಿಂದ ಮುನ್ನೂರ ಅರವತ್ತೈದು ದಿನಗಳವರೆಗೆ ವಿಸ್ತರಿಸುವುದು.

ಕಲಂ ಎರಡನೆ ತಿದ್ದುಪಡಿಯಲ್ಲಿ ಈಗಾಗಲೇ ಹೇಳಿದ ಹಾಗೆ ಭಯೋತ್ಪಾದನಾ ಕೃತ್ಯ ಎಂಬುದನ್ನು ವ್ಯವಸ್ಥಿತ ಅಪರಾಧ ಎಂದು ಸೇರಿಸ ಲಾಗಿದೆ. 2000ನೇ ಇಸ್ವಿಯಲ್ಲಿ ಇದನ್ನು ಮೂವ್ ಮಾಡಿರಲಿಲ್ಲ. ಕಲಂ ಮೂರಕ್ಕೆ ತಿದ್ದುಪಡಿ ಮಾಡಿ, ವ್ಯವಸ್ಥಿತ ಅಪರಾಧದಲ್ಲಿ ಮರಣ ಸಂಭವಿಸಿದರೆ ಎಂಬುವುದರ ಜೊತೆಗೆ ಯಾವುದಾದರೂ ಸ್ವತ್ತಿಗೆ ನಷ್ಟ ಅಥವಾ ಹಾನಿ ಉಂಟಾದಲ್ಲಿ ಎಂಬ ಪದಗಳನ್ನು ಸೇರಿಸಲಾಗಿದೆ. ಇದರ (ಬಿ)ನಲ್ಲಿ ಮರಣ ಸಂಭವಿಸಿದರೆ ವಿಧಿಸಬಹುದಾದ ದಂಡವನ್ನು ಒಂದು ಲಕ್ಷಕ್ಕಿಂತ ಕಡಿಮೆಯಾ ಗದಂತೆ ಎಂಬುದರ ಬದಲಾಗಿ ಐದು ಲಕ್ಷಕ್ಕಿಂತ ಕಡಿಮೆಯಾಗದಂತೆ ಎಂದು ಸೇರಿಸಲಾಗಿದೆ. 3 (ಸಿ)ನಲ್ಲಿ ಭಯೋತ್ಪಾಧನ ಕೃತ್ಯದಿಂದ ಮರಣ ಸಂಭವಿಸಿದರೆ ಅಥವಾ ಸ್ವತ್ತಿನ ನಷ್ಟ ಉಂಟಾದರೆ ಅದಕ್ಕಾಗಿ ಮರಣದಂಡನೆ ಹಾಗೂ ಐದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಲ್ಲದ ಜುಲ್ಮಾನೆಯನ್ನು ವಿಧಿಸಲು ಉದ್ದೇಶಿಸಲಾಗಿದೆ. ಕಲಂ 21 ಕ್ಕೆ ಒಂದು ತಿದ್ದುಪಡಿ ಮಾಡಿ, ಈ ಅಧಿನಿಯಮ ದಡಿಯಲ್ಲಿ ಅಪರಾಧವನ್ನು ಎಸಗಿದ ಸ್ವತ್ತನ್ನು ತನಿಖೆಯ ಕಾಲದಲ್ಲಿ ಮುಟ್ಟುಗೋಲು ಹಾಕಿಕೊಳ್ಳಲು ಉದ್ದೇಶಿಸಲಾಗಿದೆ. ಕಲಂ 22 ಕ್ಕೆ ತಿದ್ದುಪಡಿ ಮಾಡಿ, ಅಪರಾಧಗಳ ಸೆರೆ ಕಸ್ಟಡಿಯನ್ನು ಮೂವತ್ತು ದಿನಗಳು ಮತ್ತು ತೊಂಭತ್ತು ದಿನಗಳಿಗೆ ಬದಲಿಗೆ ಅರವತ್ತು ದಿನಗಳು ಮತ್ತು ನೂರ ಎಂಭತ್ತು ದಿನಗಳಿಗೆ ವಿಸ್ತರಿಸಲು ಉದ್ದೇಶಿಸಲಾಗಿದೆ.

**ಶ್ರೀ ಬಿ.ಸಿ.ಪಾಟೀಲ್ (ಹಿರೇಕೆರೂರು)** : ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರವನ್ನು ಈ ಕಾಯಿದೆ ತಂದಿದ್ದಕ್ಕೆ ಅಭಿನಂದಿಸುತ್ತೇನೆ. ಕಾರಣ ಏನೆಂದರೆ, ನಾವು ತಯಾರಿಸಿದಂಥ ಸೆಲ್ಯೂಟ್ ಚಿತ್ರದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಒಬ್ಬ ಗೃಹ ಮಂತ್ರಿಯಾಗಿ ಒತ್ತಾಯ ಮಾಡಿದ್ದೆ. ಈ ಕೋಕಾ ಆಕ್ಟ್‌ನ್ನು ಜಾರಿಗೆ ತರಬೇಕು ತಂದರೆ ಅನುಕೂಲವಾಗುತ್ತದೆ ಎಂದು ಹೇಳಿದ್ದಕ್ಕೆ ಮಾನ್ಯ ಮುಖ್ಯಮಂತ್ರಿಗಳು, ಇದನ್ನು ನಾನು ಒಪ್ಪಬಹುದು ಸದನದಲ್ಲಿ ಒಪ್ಪುವುದಿಲ್ಲ ವೆಂದು ಹೇಳುತ್ತಾರೆ. ಆಗ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡಿ ಕೋಕಾ ಆಕ್ಟ್ ಜಾರಿ ಮಾಡಿದ್ದೆ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಈ ಕಾಯಿದೆಯನ್ನು ತಂದು ಸದನದ ಒಪ್ಪಿಗೆಯನ್ನು ಪಡೆಯುತ್ತಿದ್ದಾರೆ. ಚಿತ್ರ ಬಿಡುಗಡೆಯಾಗುವುದಕ್ಕಿಂತ ಮುಂಚೆ ಈ ಕಾಯಿದೆ ತರುತ್ತಿರುವುದು ಬಹಳ ಹರ್ಷದಾಯಕ. ಆದ್ದರಿಂದ ಸರ್ಕಾರವನ್ನು ಅಭಿನಂದಿಸುತ್ತೇನೆ.

**ಶ್ರೀ ಎಸ್.ಸುರೇಶ್‌ಕುಮಾರ್** : ಈ ತಿದ್ದುಪಡಿಗೆ ನಮ್ಮ ಸಿನಿಮಾನೇ ಸ್ಫೂರ್ತಿ ಎಂದು ತಾವು ಹೇಳುತ್ತೀರಿ.

**ಶ್ರೀ ಯು.ಟಿ.ಖಾದರ್ (ಮಂಗಳೂರು)** : ಮಾನ್ಯ ಅಧ್ಯಕ್ಷರೆ, ಪ್ರಥಮವಾಗಿ ನಾನು ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ. ಇನ್ನು ಕಠಿಣವಾದ ಶಿಕ್ಷೆ ಕೊಡಲಿಕ್ಕೆ ಸಾಧ್ಯವಿದ್ದರೆ ಅದನ್ನು ಪರಿಗಣಿಸಬೇಕೆಂದು ಕೋರುತ್ತಾ, ನನ್ನ ಒಂದು ಅನಿಸಿಕೆ ಏನೆಂದರೆ, ಇನ್‌ವೆಸ್ಟಿಗೇಷನ್ ಆಫೀಸರ್ ಆಗಿ ಎಎಸ್‌ಪಿ ಗ್ರೇಡ್‌ಗಿಂತ ಮೇಲಿನವರ ಕೈಯಿಂದ ಮಾಡಿಸುವುದು ಒಳ್ಳೆಯದು ಎಂದು ನನ್ನ ಭಾವನೆ.

**ಶ್ರೀ ಎಸ್.ಸುರೇಶ್‌ಕುಮಾರ್** : ಇದರಲ್ಲಿ ಆಗಿದೆ.

**ಶ್ರೀ ಯು.ಟಿ.ಖಾದರ್** : ಧನ್ಯವಾದಗಳು.

## ಕರ್ನಾಟಕ ವ್ಯವಸ್ಥಿತ ಅಪರಾಧಗಳು (ತಿದ್ದುಪಡಿ) ನಿಯಂತ್ರಣ ವಿಧೇಯಕ, 2009

### ಪರ್ಯಾಲೋಚನಾ ಪ್ರಸ್ತಾವ

**ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು)** : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ವ್ಯವಸ್ಥಿತ ಅಪರಾಧಗಳು (ತಿದ್ದುಪಡಿ ನಿಯಂತ್ರಣ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವ ಮಂಡಿಸಲಾಯಿತು

**ಅಧ್ಯಕ್ಷರು** : ಪ್ರಸ್ತಾವ ಏನೆಂದರೆ, "2009ರ ಕರ್ನಾಟಕ ವ್ಯವಸ್ಥಿತ ಅಪರಾಧಗಳು (ತಿದ್ದುಪಡಿ) ನಿಯಂತ್ರಣ ವಿಧೇಯಕವನ್ನು ಪರ್ಯಾಲೋಚಿಸುವುದು"

### ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

### ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

**ಖಂಡ 2 ರಿಂದ 5 ರವರೆಗೆ**

**ಅಧ್ಯಕ್ಷರು** : "ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಅಧ್ಯಕ್ಷರು** : ಪ್ರಸ್ತಾವ ಏನೆಂದರೆ, "ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆ ಖಂಡ, ದೀರ್ಘ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವ ಅಂಗೀಕಾರ**

**ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು)** : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ವ್ಯವಸ್ಥಿತ ಅಪರಾಧಗಳು (ತಿದ್ದುಪಡಿ) ನಿಯಂತ್ರಣ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಅಧ್ಯಕ್ಷರು** : ಪ್ರಸ್ತಾವ ಏನೆಂದರೆ, "2009ರ ಕರ್ನಾಟಕ ವ್ಯವಸ್ಥಿತ ಅಪರಾಧಗಳು (ತಿದ್ದುಪಡಿ) ನಿಯಂತ್ರಣ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

ಅನುಬಂಧ–6

## ೩೫) ಕರ್ನಾಟಕ ಕಳ್ಳಬಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವ ಅಪಾಯಕಾರಿ ಚಟುವಟಿಕೆಗಳನ್ನು ತಡೆಗಟ್ಟುವ (ತಿದ್ದುಪಡಿ) ವಿಧೇಯಕ, 2009

### ಪರ್ಯಾಲೋಚನಾ ಪ್ರಸ್ತಾವ

**ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು)** : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜು ಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವ ಅಪಾಯಕಾರಿ ಚಟುವಟಿಕೆಗಳನ್ನು ತಡೆಗಟ್ಟುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಅಧ್ಯಕ್ಷರು** : ಈ ಬಗ್ಗೆ ವಿವರಣೆ ಕೊಡಿ.

**ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು)** : ಮಾನ್ಯ ಅಧ್ಯಕ್ಷರೆ, ಈ ಆರು ಬಗೆಯ ಅಪರಾಧಕ್ಕೆ ಈಗಾಗಲೇ 1985ರಲ್ಲಿ ಆಕ್ಟ್ ತಂದು ಅದರಲ್ಲಿ ಪ್ರಾವಿಜನ್ಸ್ ಎಲ್ಲಾ ಇಟ್ಟಿದೆ. ಅದರ ಪ್ರಾವಿಜನ್ಸ್ ಚೇಂಜ್ ಮಾಡುತ್ತಿಲ್ಲ. ಶೀರ್ಷಿಕೆಯಲ್ಲಿ ಇದರೊಟ್ಟಿಗೆ ವಿಡಿಯೋ ಮತ್ತು ಆಡಿಯೋ ಪೈರಸಿ ಬಹಳ ದೊಡ್ಡ ಸ್ಕೇಲ್‌ನಲ್ಲಿ ಮಾಡಿ ಏನು ಅನರ್ಥವಾಗುತ್ತದೆ ಅದರ ಬಗ್ಗೆ ಪಕ್ಕದ ರಾಜ್ಯಗಳಲ್ಲಿ ಇದನ್ನು ಗೂಂಡಾ ಆಕ್ಟ್‌ನಲ್ಲಿ ಸೇರಿಸಿದ್ದಾರೆ. ಇವತ್ತು ಕೃತಿಸ್ವಾಮ್ಯ ಅಧಿನಿಯಮ 1957ರ ಕೇಂದ್ರ ಅಧಿನಿಯಮ 14ರ ಅಡಿಯಲ್ಲಿ ದಂಡನೀಯವಾದ, ಸಾರ್ವಜನಿಕ ಸುವ್ಯವಸ್ಥಿತೆಯನ್ನು ಕಾಪಾಡಲು ಪ್ರತಿಕೂಲ ಪರಿಣಾಮ ಬೀರುವ ಅಥವಾ ಪ್ರತಿಕೂಲ ಪರಿಣಾಮ ಬೀರಬಹುದಾದ ಸಿನಿಮ್ಯಾಟೋಗ್ರಾಫ್ ಫಿಲ್ಮಂ ಅಥವಾ ಆ ಫಿಲ್ಮಂಗೆ ಸಂಬಂಧಪಟ್ಟ ಸೌಂಡ್ ಟ್ರ್ಯಾಕಿನ ಯಾವುದೇ ಭಾಗವನ್ನು ಒಳಗೊಂಡ ಧ್ವನಿಮುದ್ರಣದ ಸಂಬಂಧದಲ್ಲಿ ವಾಣಿಜ್ಯ ಲಾಭಕ್ಕಾಗಿ ದೃಶ್ಯ ಅಥವಾ ಧ್ವನಿಯನ್ನು ಕಳ್ಳಮುದ್ರಣದಲ್ಲಿ